ಮಾಗಡಿ ಪಟ್ಟಣದಲ್ಲಿ ಚಿರತೆಯಿಂದ ಗಾಯಗೊಂಡವರಿಗೆ ಪರಿಹಾರ.

೮೦೦ ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ)—ಮಾನ್ಯ ಅರಣ್ಯ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಾಗಡಿ ಪಟ್ಟಣದಲ್ಲಿ ಚಿರತೆಯು ಒಬ್ಬ ರೈತನನ್ನು ಕಚ್ಚಿ ಗಾಯಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಆ ರೈತನ ಸಂಬಂಧದವರಿಗೆ ಸರ್ಕಾರದ ಪರಿಹಾರ ನೀಡಿದೆಯೇ ?

ಶ್ರೀ ಬಿ. ಬಸವಲಿಂಗಪ್ಪ. (ಅರಣ ಮತ್ತು ಪಶುಸಂಗೋಪನಾ ಸಚಿವರು).—

ಅ) ಬಂದಿದೆ.

ಆ) ಈ ಪ್ರಕರಣದಲ್ಲಿ ರೈತರು ಖಾಯಂ ಅಂಗಹೀನರಲ್ಲದ ಕಾರಣ ಸರ್ಕಾರಿ ಆದೇಶ ಸಂಖ್ಯೆ ಎಹೆಚ್‌ಎಫ್‌ಎಫ್ ೨೨ ಎಫ್ ಡಬ್ಲ್ಯು ಎಲ್ ೮೮ ದಿನಾಂಕ ೨೯-೬-೮೯ ರ ಪ್ರಕಾರ ಪರಿಹಾರ ನೀಡಲು ಅವಕಾಶವಿರುವುದಿಲ್ಲ. ಗಾಯಾಳುಗಳ ಗಾಯದ ತೀವ್ರತೆಯ ಬಗ್ಗೆ ವೈದ್ಯಾಧಿಕಾರಿಗಳ ಪ್ರಮಾಣ ಪತ್ರವನ್ನು ಪರಿಶೀಲಿಸಿ ಮಾನವೀಯತೆ ದೃಷ್ಟಿಯಿಂದ ಸೂಕ್ತ ಪರಿಹಾರ ನೀಡಲು ಅವಶ್ಯವಿದ್ದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಮಾಗಡಿ ತಾಲ್ಲೂಕು, ಹುಳ್ಳೇನಹಳ್ಳಿ ಗ್ರಾಮದಲ್ಲಿ ಪಶುವೈದ್ಯ ಶಾಲೆಯಂ ಪ್ರಾರಂಭ

೮೬೬ ಶ್ರೀ ಹೆಚ್. ಎಂ. ರೇವಣ್ಣ, (ಮಾಗಡಿ).—ಮಾನ್ಯ ಅರಣ್ಯ ಮತ್ತು ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಾಗಡಿ ತಾಲ್ಲೂಕು ಹುಳ್ಳೇನಹಳ್ಳಿ ಗ್ರಾಮದಲ್ಲಿ ಪಶುವೈದ್ಯ ಶಾಲೆಯು ಪ್ರಾರಂಭಕ್ಕೆ ಪಂಚಾಯಿತಿಯಿಂದ ಹಣ ಸಂದಾಯವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರಾತಿ ನೀಡಲಾಗುವುದು ?

ಶ್ರೀ ಬಿ. ಬಸವಲಿಂಗಪ್ಪ (ಅರಣ್ಯ ಮತ್ತು ಪಶುಸಂಗೋಪನಾ ಸಚಿವರು).—

ಅ) ಬಂದಿದೆ.

ಆ) ಪ್ರಸಕ್ತ ಸಾಲಿನಲ್ಲಿ ಸದರೀ ಸ್ಥಳದಲ್ಲಿ ಗ್ರಾಮೀಣ ಪಶುವೈದ್ಯ ಶಾಲೆಯನ್ನು ತೆರೆಯಲಾಗುವುದು.

ಸರ್ಕಾರಿ ಆಸ್ಪತ್ರೆಯಲ್ಲಿನ ಔಷಧಿಗಳ ಪ್ರಮಾಣ

೫೧೬ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ).—ಮಾನ್ಯ ಆರೋಗ್ಯ ಮತ್ತು ಕುಟುಂಬಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ಸರ್ಕಾರಿ ಔಷಧಿ ಮಳಿಗೆಯಲ್ಲಿ ೧೯೮೯-೯೦ ನೇ ಸಾಲಿನಲ್ಲಿ ದಾಸ್ತಾನು ಇದ್ದ ಔಷಧಿಗಳ ಪ್ರಮಾಣ ಎಷ್ಟು ?

ಆ) ಇವುಗಳನ್ನು ಯಾವಾಗ ಕೊಳ್ಳಲಾಗಿದೆ ಹಾಗೂ ಯಾರಿಂದ ಕೊಳ್ಳಲಾಗಿದೆ?

ಶ್ರೀಮತಿ ಮನೋರಮಾ ಮದ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಮಾಹಿತಿಯನ್ನು ಲಭ್ಯಿಸಲಾಗಿದೆ.

ಆ) ದಿನಾಂಕ ೨೮-೪-೮೯ ರಿಂದ ದಿನಾಂಕ ೩೧-೩-೯೦ ರ ವರೆಗೆ ಈ ಕೆಳಕಂಡ ದರಗುತ್ತಿಗೆ ಕಂಪನಿಗಳಿಂದ ಔಷಧಿ ಸಾಮಗ್ರಿಗಳನ್ನು ಖರೀದಿಸಲಾಗಿದೆ.

೧) ಮೆ॥ ಬೆಂಗಳೂರು ಸರ್ಜಿಕಲ್ಸ್ ಟ್ರೇಡರ್ಸ್, ಬೆಂಗಳೂರು.
೨) ಮೆ॥ ಬೆಂಗಳೂರು ಸರ್ಜಿಕಲ್ಸ್, ಬೆಂಗಳೂರು.
೩) ಮೆ॥ ಬೆಂಗಾಲ್ ಇಮ್ಯುನಿಟಿ ಲಿಮಿಟೆಡ್, ಬೆಂಗಳೂರು.